## ಮಕ್ಕಳ ಕಥೆಗಳಿಗೆ ಹೊಸ ಹಾದಿ

'ಅದೇ ರಾಗ ಅದೇ ಹಾಡು' (ಕೋಡಿಬೆಟ್ಟು ರಾಜಲಕ್ಷ್ಮಿ, ನ. 17) ಮುಖಪುಟ ಲೇಖನ, ಹಳೆಯ ಕಥೆಗಳನ್ನು ಯಥಾರೂಪದಲ್ಲಿಯೇ ಹೊಸ ಯುಗದ ಮಕ್ಕಳಿಗೆ ಹೇರಿದರೆ ಅಪಾಯ ಕಟ್ಟಿಟ್ಟ ಬುತ್ತಿ' ಎಂಬ ಸಂದೇಶ ನೀಡಿದೆ. ಇಂದಿನ ಕಾಲಮಾನಕ್ಕೆ ಹೊಂದಿಸಿಕೊಂಡು ಕಥೆ ಹೇಳುವ, ಪದ್ಯ ಬರೆಯುವ ಶೈಲಿ ಬದಲಿಸಿಕೊಳ್ಳಬೇಕಾದುದು ಅತ್ಯವಶ್ಯಕ. ಹಳೆಯ ಕಥೆಗಳೊಡನೆ ಹೊಸ ಕಥೆಗಳನ್ನೂ ಹೇಳುವ ಕಲೆಯನ್ನು ದೊಡ್ಡವರು ಬೆಳೆಸಿಕೊಳ್ಳಬೇಕಿದೆ.

—ಡಾ. ವಾಸುದೇವ ಶರ್ಮಾ ಎನ್.ವಿ., ಬೆಂಗಳೂರು



## ಆಸಕ್ತಿ ಕಡಿಮೆ ಆಗಿಲ್ಲ

'ಬದಲಾಗಬೇಕಿದೆ ಮಕ್ಕಳ ಕಥೆಗಳು' ಲೇಖನ ತುಂಬ ಚೆನ್ನಾಗಿದೆ. ನಾನು ನನ್ನ ಮಕ್ಕಳು, ಅಕ್ಕನ ಮಕ್ಕಳು, ಕಸಿನ್ಸ್, ಅಕ್ಕ ಪಕ್ಕದ ಮನೆಯ ಮಕ್ಕಳು ಎಲ್ಲರಿಗೂ ಕಥೆ ಹೇಳುತ್ತಿದ್ದೆ, ಈಗ ಯಾಕೆ ಸಾಧ್ಯ ಆಗುತ್ತಿಲ್ಲ ಅಂತ ಈಗ ಕೆಲವು ವರ್ಷಗಳಿಂದ ಯೋಚನೆ ಮಾಡುತ್ತಿದ್ದೆ, 'ಸುಧಾ' ಲೇಖನ ಇದಕ್ಕೆ ಉತ್ತರ ಕೊಟ್ಟಿದೆ, ಆದರೆ ಕಥೆ ಹೇಳುವ ಆಸೆ, ಆಸಕ್ತಿ ಕಡಿಮೆ ಆಗಿಲ್ಲ,

—ನೀರಜಾ ಎಚ್.ಕೆ.

## ಅರಿವು ಮೂಡಿಸಬಹುದು

ಕಥೆ ಮುಖಾಂತರ ಮಕ್ಕಳಿಗೆ ಎಷ್ಟೋ ವಿಷಯಗಳನ್ನು ತಿಳಿಸಬಹುದು, ಅರಿವನ್ನು ಮೂಡಿಸಬಹುದು. ಕಥೆಗಳು ಕಾಲಕ್ಕೆ ತಕ್ಕಂತೆ ಇರಬೇಕು. ಹಾಗಾದರೆ ಮಾತ್ರ ಮಕ್ಕಳು ಕೇಳುತ್ತಾರೆ. ನಾನು ನನ್ನ ಮಕ್ಕಳಿಗೆ ಸುಮಾರು 10 ವರ್ಷ ಪ್ರತಿದಿನ ಕಥೆ ಹೇಳುತ್ತಿದ್ದೆ. ಆ ಕಥೆಗಳ ಮೂಲಕ ನಮ್ಮ ಊರಿನ ಬಗ್ಗೆ, ನಮ್ಮ ಕರ್ತವ್ಯದ ಬಗ್ಗೆ, ಗುರು ಹಿರಿಯರಿಗೆ ಗೌರವ ಕೊಡುವ ಬಗ್ಗೆ, ಸಾಧಕರ ಬಗ್ಗೆ ಹಾಗೂ ಧೈರ್ಯದಿಂದ ಮತ್ತು ಆತ್ಮವಿಶ್ವಾಸದಿಂದ ಇರುವ ಬಗ್ಗೆ ಅವರಿಗೆ ತಿಳಿಸಿಕೊಡಲು ಸಾಧ್ಯವಾಯಿತು.

—ಕೆ. ಗಣೇಶ ರಾಜ, ಬೆಂಗಳೂರು

## ನಂಜು' ಕಥೆ

'ನಂಜು' ಕಥೆ (ವಸುಮತಿ ಉಡುಪ. ನ. 17) ಸೊಗಸಾಗಿ ಓದಿಸಿಕೊಂಡು ಹೋಗುತ್ತದೆ. ಮಗನಿಗೆ ಅಪ್ಪನಲ್ಲಿ ಮೂಡಿದ್ದ ಅಪಾರ್ಥದ ನಂಜನ್ನು, ಸೊಸೆ ರಾಧ ಅಪ್ಪ, ಮಗನಲ್ಲಿ ಪ್ರೀತಿಯ ರಾಗ ಮೂಡಿಸಿ ತಿಳಿಯಾಗಿಸಿ, ಒಲವಿನ ಅಮೃತಧಾರೆ ಹರಿಸುವಲ್ಲಿ ಯಶಸ್ವಿಯಾಗಿದ್ದು ಸಂತಸ ತರುತ್ತದೆ. ಸಮಾಜದಲ್ಲಿ ಭೂತಗನ್ನಡಿ ಹಾಕಿ ಹುಡುಕಿದರೂ ಸಿಕ್ಕದ 'ರಾಧೆ'ಯಂಥ ಆದರ್ಶ ಸೊಸೆ ಎಲ್ಲ ಕುಟುಂಬಗಳಲ್ಲೂ ಇರಬಾರದೇ ಎನಿಸಿತು.

—ಸುಮನಾ, ಬಿ.ಎಸ್. ಮುಳ್ಳೂರ, ಹಲಗತ್ತಿ



## ಮಲೆನಾಡಿನ ಭಾಷೆ ಚೇತೋಹಾರಿ

ತಂದೆ, ಮಕ್ಕಳು, ಅಣ್ಣ, ತಮ್ಮ ಎಷ್ಟೇ ವರ್ಷಗಳು ದೂರವಿರಲಿ, ಪರಸ್ಪರರ ಮಧ್ಯೆ ಎಂತಹ ಅಹಿತಕರ ಘಟನೆಗಳೇ ನಡೆದಿರಲಿ, ಅವರು ದೂರವಾದಂತೆಲ್ಲಾ ಸಂಬಂಧ ಸನಿಹ ಬರಲು ಮನಸ್ಸು ಹಪಹಪಿಸುತ್ತದೆ. ಬಾಹ್ಯ ಸೌಂದರ್ಯಕ್ಕಿಂತ ಅಂತರಂಗದ ಚೆಲುವು ಹಿರಿದು ಎನ್ನುವುದಕ್ಕೆ ಸೊಸೆ ರಾಧೆಯ ವ್ಯಕ್ತಿತ್ವವನ್ನು ರೂಪಿಸಿರುವುದು ಕಥೆಯ ಜೀವಾಳ. ಎಂದಿನಂತೆ ವಸುಮತಿ ಉಡುಪ ಅವರ ಮಲೆನಾಡಿನ ಭಾಷೆ ಚೇತೋಹಾರಿ.

—ಶಕುಂತಲ ರೆಡ್ಡಿ, ರಾಯಪುರ

## ಪುಟ್ಟಹಕ್ಕಿಯ ಮಹಾಯಾನ



'ಪುಟ್ಟ ಹಕ್ಕಿಯ ಮಹಾಯಾನ' (ಡಾ.ಎಸ್. ಶಿಶುಪಾಲ, ನ. 17) ಲೇಖನ ಚೆನ್ನಾಗಿದೆ. ಗೊರವನ 11 ದಿನದ ಪಯಣದ ನಕ್ಷೆ ಹಾಕಿದ್ದರಿಂದ ಪಕ್ಷಿ ವೀಕ್ಷಕರ ಕುತೂಹಲ ತಣಿಸಿದಂತಾಗಿದೆ.

—ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ
ವೀರೇಶ ಗಣಿಕಲ್, ವಡ್ಡರಹಟ್ಟಿ, ಭಾರತಿ ಗಂಗಾಧರ್, ಬೆಂಗಳೂರು

## ರೋಚಕ ಮಾಹಿತಿ

ಲೇಖಕರು 'ಪಟ್ಟೆ ಬಾಲದ ಹಿನ್ನೀರು ಗೊರವ' ಹಕ್ಕಿಯ ಮಹಾಯಾನವನ್ನು ಹಾರಾಟದ ನಕ್ಷೆ ಸಹಿತವಾಗಿ ಕಣ್ಣಿಗೆ ಕಟ್ಟುವ ಹಾಗೆ ತಿಳಿಸಿಕೊಟ್ಟಿದ್ದಾರೆ. ಪುಟ್ಟ ಪಕ್ಷಿ ತನ್ನ ಗುಂಪಿನ ಹಿರಿಯರ ಮಾರ್ಗದರ್ಶನವಿಲ್ಲದೆ, ಎಲ್ಲಿಯೋ ವಿರಮಿಸದೆ ಸಾವಿರಾರು ಕಿಲೋಮೀಟರ್ ಹಾರುವುದನ್ನು ವೈಜ್ಞಾನಿಕ ಮಾಹಿತಿಗಳೊಂದಿಗೆ ಸೊಗಸಾಗಿ ನಿರೂಪಿಸಿದ್ದಾರೆ.

—ನೇತ್ರಾವತಿ ಹರಿಪ್ರಸಾದ್, ಬೆಂಗಳೂರು,
ಜಿ. ಸುಬ್ರಹ್ಮಣ್ಯ, ಸ್ವಾಮಿ ಎಚ್.ಎಸ್.

## ಇಂಥ ಲೇಖನ ಹೆಚ್ಚು ಪ್ರಕಟಿಸಿ

ಪುಟ್ಟ ಹಕ್ಕಿಯ ಮಹಾಯಾನ ನಿಜಕ್ಕೂ ಸೋಜಿಗದಿಂದ ಕೂಡಿದ ವಿಷಯ. ಈ ಹಕ್ಕಿಗಳ ವಲಸೆ ಎಷ್ಟೊಂದು ಪ್ರಶ್ನೆಗಳನ್ನು ತರುತ್ತದೆ. ಉತ್ತರ ಸಿಗುವುದು ಸುಲಭವಲ್ಲ. ಪ್ರಕೃತಿಗೆ ಮಾತ್ರ ಈ ಪ್ರಶ್ನೆಗಳಿಗೆ ಉತ್ತರ ಸಿಗುತ್ತದೆ. ನಮಗೆ ತಿಳಿಯದ ಹಲವು ವಿಚಾರಗಳನ್ನು ಲೇಖನ ತಿಳಿಸಿದೆ. ಇಂಥ ಲೇಖನಗಳನ್ನು 'ಸುಧಾ'ದಲ್ಲಿ ಹೆಚ್ಚು ಹೆಚ್ಚು ಪ್ರಕಟಿಸಿ.

—ಸೀತಾರಾಮ್ ಕೆ. ಬೆಂಗಳೂರು

## 'ಬಸರಿ ಮರ

'ಚಂದದ ಹಸುರಿನ ಬಸರಿ ಮರ' (ವಿನು ಗಂಗೆ, ನ. 17) ಬರಹ ಓದಿ ಆಶ್ಚರ್ಯವಾಯಿತು. ಏಕೆಂದರೆ ಆಡು ಮುಟ್ಟದ ಸೊಪ್ಪಿನ ಬಗ್ಗೆ ಗೊತ್ತಿತ್ತು. ಆಕಸ್ಮಿಕವಾಗಿ ತಿಂದರೆ ಸಾವು ಸಂಭವ. ಬಸರಿ ಮರದ ಸೊಪ್ಪು ತಿಂದರೆ ಜಾನುವಾರುಗಳಿಗೆ ಸಾವು ಸಂಭವ. ಅದು ನಶಿಸುವ ಹಂತ ತಲುಪಲಿದೆ ಎಂದು ಲೇಖಕಿ ಈ ಬಗ್ಗೆ ಕಾಳಜಿ ವಹಿಸಿ ರಕ್ಷಣೆ ವಿಚಾರ ತಿಳಿಸಿದ್ದು ಸಂತಸ ತಂದಿತು.

—ಕೆ ಹೊನ್ನಪ್ಪ, ಕ್ಯಾತಸಂದ್ರ

## ಯುವ ಕ್ರೀಡಾಪಟುಗಳನ್ನು ಪರಿಚಯಿಸಿ

'ಚಿನ್ನದ ಹೊಳಪಿನ ಕಥೆಗಳು' (ಪ್ರಮೋದ, ನ. 17) ಬರಹದಲ್ಲಿ ತಿಳಿಸಿದಂತೆ ಕರ್ನಾಟಕದ ಹಾಕಿ ತಂಡ ಮೊದಲ ಬಾರಿಗೆ ಚಿನ್ನದ ಪದಕ ಗೆದ್ದಿರುವುದು ಅತ್ಯಂತ ಸಂತಸದ ಸಂಗತಿ. ಇದಲ್ಲದೆ ನಮ್ಮ ಹಲವಾರು ಕ್ರೀಡಾಪಟುಗಳು ರಾಷ್ಟ್ರೀಯ ಕ್ರೀಡೆ (National games) ಯಲ್ಲಿ ಪದಕಗಳನ್ನು ಗಳಿಸಿದ್ದಾರೆ. ಅವರೆಲ್ಲರನ್ನೂ ಪರಿಚಯಿಸಿದರೆ ನಮ್ಮ ಯುವ ಕ್ರೀಡಾಪಟುಗಳಿಗೆ ಉತ್ತೇಜನ ಕೊಟ್ಟಂತಾಗುತ್ತದೆ.

—ಚಂದ್ರಶೇಖರ. ಆರ್.ಕೆ.

## ತಿದ್ದುಪಡಿ

'ಏಕೆ ಅಗತ್ಯ ಆ್ಯಂಟಿಬಯೊಟಿಕ್' (ಡಾ. ಕೆ. ಬಿ. ರಂಗಸ್ವಾಮಿ ನ.28) ಆರೋಗ್ಯ ಲೇಖನದಲ್ಲಿ ಆ್ಯಂಟಿಬಯೊಟಿಕ್ ಔಷಧಗಳು ವೈರಾಣುಗಳನ್ನು ದೇಹದಿಂದ ಹೊಡೆದೋಡಿಸಲು ಉಪಯುಕ್ತ ಎಂದು ಪ್ರಕಟವಾಗಿದೆ. ಅದು ಅನುಪಯುಕ್ತ ಎಂದಾಗಬೇಕಿತ್ತು. ಆ್ಯಂಟಿಬಯಾಟಿಕ್‌ಗಳು ಬ್ಯಾಕ್ಟೀರಿಯಾಗಳನ್ನು ಹತ್ತಿಕ್ಕಲು ಸಹಕಾರಿಯೇ ಹೊರತು ವೈರಾಣುಗಳನ್ನಲ್ಲ.

—ಸಂ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in